"ನಾಳೆಯಿಂದ ನಾನು ಫ್ರೀ ಕಣ್ರೀ. ಆ ಖುಷಿಗೆ..."

"ಅಂದ್ರೆ?"

"ಇವತ್ತು ನನ್ನ ಕೆಲಸದ ಕೊನೇ ದಿನ. ರಿಟೈರಾಯ್ತು ನಂಗೆ..."

"ಸುಳ್ಳೇ..." ಅಂದಳು ವೈಷ್ಣವಿ.

"ಸುಳ್ಯಾತಕ್ಕೆ ಹೇಳ್ಲಿ?"

"ನಿಮ್ಮನ್ನ ನೋಡಿದ್ರೆ ಅರವತ್ತು ವರ್ಷ ಅಂತ ಯಾರು ಹೇಳ್ತಾರೆ?"

"ಏನು ನಿಮ್ಮ ಮಾತಿನ ಅರ್ಥ? ನೋಡೋಕೆ ಹಾಗೆ ಕಾಣ್ತೆಲ್ಲ ಅಂತಾನಾ? ಬುದ್ಧಿ ಅಷ್ಟು ಬೆಳೆದಿಲ್ಲ ಅಂತಾನಾ?"

"ಎರಡೂ..." ಎನ್ನುತ್ತಾ ನಕ್ಕಳು ವೈಷ್ಣವಿ.

"ಸುಮ್ನಿರು ಮಗೂ, ತೀರಾ ಹಗುರವಾಗಿ ಮಾತಾಡ್ಬಾರ್ದು" ಎಚ್ಚರಿಸಿದರು ರಾಯರು.

**ಪ್ರೀತಿ ಕಲಿಸುವ ಮೊದಲ ಪಾಠವೇ ಸುಳ್ಳು ಹೇಳುವುದು. ತನಗೂ ಅದು ಅನ್ವಯಿಸುವಂತಾಗುವ ದಿನಗಳು ಬಂದಿರುವುದನ್ನು ನೆನೆದು ತುಟಿಗಳೆಡೆಯ ಮೃದುಹಾಸ ಮತ್ತೊಂದೆರಡು ಇಂಚಿನಷ್ಟು ಹಿಗ್ಗಲಿಸಿತು.**

"ಸತ್ಯ ಹೇಳ್ಬೇಕೂಂದ್ರೆ ನಂಗೆ ಇನ್ನೂ ಅರವತ್ತಾಗಿಲ್ಲ ಕಣ್ರೀ. ಹಿಂದಿನ ಕಾಲದಲ್ಲಿ ಹೇಳೋರಿಲ್ಲ, ಕೇಳೋರಿಲ್ಲ. ಎರಡು ವರ್ಷ ಜಾಸ್ತಿ ಮಾಡಿ ಸ್ಕೂಲಿಗೆ ಸೇರ್ಸಿದಾರೆ"

"ಒಳ್ಳೇದೇ ಆಯ್ತಲ್ಲ? ಬೇಗ ನೊಗ ಕಳಚಿಕೊಂಡೆ ಅಂತ ಖುಷಿ ಪಡು. ಹೇಗೂ ಎಲ್ಲಾ ಜವಾಬ್ದಾರಿ ಮುಗಿಸಿಕೊಂಡಿದ್ದಿ. ಆರಾಮಾಗಿ ಇದ್ರಾಯ್ತು" ರಾಯರು ಶುಭ ಹಾರೈಸಿದರು. ಅವರ ಮಾತು ಫಲ್ಗುಣನಿಗೆ ಒಪ್ಪಿತವಾಗಲಿಲ್ಲ.

"ನೊಗ ಹೊತ್ತು ಹೊತ್ತು ಅಭ್ಯಾಸ ಆದೋರಿಗೆ ಖುಷಿಯಾಗಲ್ಲ ಅಂಕಲ್. ಹೆಗಲು ದಡ್ಡು ಬಿದ್ದಿರುತ್ತೆ. ಇನ್ನೊಂದು ನೊಗ ಹೊರೋ ಹುರುಪು ಮನಸ್ಸಲ್ಲಿ ಉಳ್ಕೊಂಡಿರುತ್ತೆ..." ಹೇಳಿದ್ದು ರಾಯರಿಗಾದರೂ ಮಾತಿನ ಕೊನೆಯಲ್ಲಿ ಫಲ್ಗುಣ ನೋಡಿದ್ದು ವೈಷ್ಣವಿಯ ಕಡೆಗೆ.

"ಅಂದ್ರೆ? ಹೊಸ ಕೆಲಸ ಸಿಕ್ಕಿದ್ರೆ ಸೇರ್ಕೋತೀರಾ?" ಚೇಷ್ಟೆಯ ದನಿಯಲ್ಲಿ ಕೇಳಿದಳು ವೈಷ್ಣವಿ.

"ಖಂಡಿತಾ. ಹೊಸ ಜವಾಬ್ದಾರಿ ಸಿಕ್ಕಿದ್ರೆ ನಿಭಾಯಿಸೋವಷ್ಟು ಉತ್ಸಾಹ ಉಳಿಸ್ಕೊಂಡಿದೀನಿ."

"ಕೆಲಸಾನೂ ಬೇಡ, ಏನೂ ಬೇಡ. ದಿನಾ ನಮ್ಮಲ್ಲಿಗೆ ಬಂದ್ಬಿಡು. ನಂಗೂ ಹೊತ್ತು ಹೋಗುತ್ತೆ..." ರಾಯರು ಹೇಳಿದರು.

"ಒಪ್ಕೊಂಬಿಡಿ. ಅಪ್ಪನಿಗೆ ಚೆಸ್ ಆಡೋಕೆ ಜೊತೆ ಸಿಕ್ಕಿದ ಹಾಗಾಗುತ್ತೆ. ನಂಗೂ ಬಿಡುಗಡೆ ಸಿಕ್ಕುತ್ತೆ."

"ನೀವು ಕರೀದಿದ್ರೂ ಇನ್ಮೇಲೆ ದಿನಾ ಬರ್ತೀನಿ. ಎಷ್ಟು ದೂರ ಮಹಾ? ಎಡವಿ ಬಿದ್ರೆ ನಿಮ್ಮ ಮನೆ."

"ಹಾಗಂತ ಎಡವೋಕೆ ಹೋಗ್ಬೇಡಿ ಮಾರಾಯ್ರಾ..." ಹೊರಟು ನಿಂತ ಅವನ ಬೆನ್ನ ಹಿಂದೆ ಬೀಳ್ಕೊಡಲು ಮೇಲೇಳುತ್ತಾ ಉದ್ಗರಿಸಿದಳು ವೈಷ್ಣವಿ.

"ಎಡವಿ ಬಿದ್ರೆ ನಿಮ್ಮನೆ ಅಂದ್ನಲ್ಲ? ಬೀದೀಲಿ ಬೀಳಲ್ಲ ನಾನು. ಬಿದ್ರೆ ನಿಮ್ಮನೇಲೇ..."

"ಆಯ್ತಾಯ್ತು. ಗೇಟು ತೆಗೆದಿಟ್ಟಿರಲು ಹೇಳ್ತೀನಿ..."